## ಪ್ರಾರ್ಥನೆ

### ಶಿವಸ್ತೋತ್ರಮ್

ನಿಖಿಲಭುವನಜನ್ಮ–ಸ್ಥೇಮಭಂಗಪ್ರರೋಹಾಃ
ಅಕಲಿತಮಹಿಮಾನಃ ಕಲ್ಪಿತಾ ಯತ್ರ ತಸ್ಮಿನ್ ।
ಸುವಿಮಲಗಗನಾಭೇ ಈಶಸಂಸ್ಥೇಽಪ್ಯನೀಶೇ
ಮಮ ಭವತು ಭವೇಽಸ್ಮಿನ್ ಭಾಸುರೋ ಭಾವಬಂಧಃ ॥

ಶಿವನ ಮಹಿಮೆಯನ್ನು ಬಣ್ಣಿಸಲು ಅಸದಳ. ಅವನು ಶುಭ್ರತೆಯಲ್ಲಿ ಆಕಾಶವನ್ನು ಹೋಲುವನು. ಅವನಲ್ಲಿ ನಿಖಿಲಪ್ರಪಂಚದ ಸೃಷ್ಟಿಸ್ಥಿತಿ ಪ್ರಳಯಗಳ ಕಾರ್ಯವು ಕಲ್ಪಿತವಾಗಿದೆ. ವಿಶ್ವಕ್ಕೆಲ್ಲ ಒಡೆಯನಾದರೂ ತನಗೆ ಒಡೆಯನಿಲ್ಲದ ಶಿವನ ಪಾದಪದ್ಮದಲ್ಲಿ ನನ್ನ ಈ ಜೀವನದ ಪ್ರಜ್ವಲಿಸುವ ಭಕ್ತಿ ನೆಲೆಸಲಿ.

ನಿಹತನಿಖಿಲಮೋಹೇಽಧೀಶತಾ ಯತ್ರ ರೂಢಾ
ಪ್ರಕಟಿತಪರಪ್ರೇಮ್ಣಾ ಯೋ ಮಹಾದೇವಸಂಜ್ಞಃ ।
ಅಶಿಥಿಲಪರಿರಂಭಃ ಪ್ರೇಮರೂಪಸ್ಯ ಯಸ್ಯ
ಹೃದಿ ಪ್ರಣಯತಿ ವಿಶ್ವಂ ವ್ಯಾಜಮಾತ್ರಂ ವಿಭುತ್ವಮ್ ॥

ಮೋಹವನ್ನು ನಾಶಮಾಡುವ ಶಿವನಲ್ಲಿ ಒಡೆತನವು ಸದಾ ನೆಲೆಸಿರುವುದು. ಪ್ರಕಟವಾದ ಮಹಾಪ್ರೇಮದಿಂದ ಮಹಾದೇವನೆಂಬ ಹೆಸರು ಅವನಿಗೆ ಸಲ್ಲುವುದು. ಆ ಶಿವನ ಪರಮಪ್ರೇಮದಿಂದ ಕೂಡಿದ ಆಲಿಂಗನವು ವಿಶ್ವದ ಪ್ರಭುತ್ವವೂ ಕೂಡ ಒಂದು ಮಾಯೆ ಎಂಬ ಭಾವವನ್ನು ಹೃದಯದಲ್ಲಿ ಉಂಟುಮಾಡುವುದು.

ವಹತಿ ವಿಪುಲವಾತಃ ಪೂರ್ವಸಂಸ್ಕಾರರೂಪಃ
ಪ್ರಮಥತಿ ಬಲವೃಂದಂ ಘೂರ್ಣಿತೇವೋರ್ಮಿಮಾಲಾ ।
ಪ್ರಚಲತಿ ಖಲು ಯುಗ್ಮಂ ಯುಷ್ಮದಸ್ಮತ್ಪ್ರತೀತಂ
ಅತಿವಿಕಲಿತರೂಪಂ ನೌಮಿ ಚಿತ್ತಂ ಶಿವಸ್ಥಮ್ ॥

ಬಿರುಗಾಳಿ ಬೀಸಿ ಅಲೆಯನ್ನು ಎಬ್ಬಿಸುವಂತೆ ಪೂರ್ವಸಂಸ್ಕಾರವೆಂಬ ಮಹಾಬಿರುಗಾಳಿ ಬೀಸಿ 'ನಾನು' 'ನೀನು' ಎಂಬ ಅಲೆಗಳನ್ನು ಉಂಟು ಮಾಡಿದೆ. ಶಿವನಲ್ಲಿ ನೆಲೆಸಿರುವ ಅಂತಹ ವಿಕಲಿತರೂಪವಾಗಿದ್ದ ಮನಸ್ಸನ್ನು ನಾನು ನಮಿಸುವೆನು.

ಜನಕಜನಿತಭಾವೋ ವೃತ್ತಯಃ ಸಂಸ್ಕೃತಾಶ್ಚ
ಅಗಣನಬಹುರೂಪೋ ಯತ್ರ ಏಕೋ ಯಥಾರ್ಥಃ ।
ಶಮಿತವಿಕೃತಿವಾತೇ ಯತ್ರ ನಾಂತರ್ಬಹಿಶ್ಚ
ತಮಹಹ ಹರಮೀಡೇ ಚಿತ್ತವೃತ್ತೇರ್ನಿರೋಧಮ್ ॥

ಎಲ್ಲಿ ಜನಕ–ಜನಿತಭಾವ, ಪರಿಶುದ್ಧವಾದ ವೃತ್ತಿಗಳು ಮತ್ತು ಅಗಣಿತವಾದ ರೂಪಗಳು ಒಂದೇ ಸತ್ವದಲ್ಲಿ ಏಕವಾಗುವುವೊ, ಎಲ್ಲಿ ಒಳಗೆ ಹೊರಗೆ ಎಂಬ ಭಾವ ಕೊನೆಗಾಣುವುದೊ, ಪ್ರವೃತ್ತಿಗಳೆಂಬ ಅಲೆಗಳು ಎಲ್ಲಿ ಶಾಂತವಾಗುವುವೊ ಅಂತಹ, ಚಿತ್ತವೃತ್ತಿಯನ್ನು ನಿರೋಧಿಸುವ ಹರನನ್ನು ನಾನು ಸ್ತುತಿಸುವೆನು.

–ಸ್ವಾಮಿ ವಿವೇಕಾನಂದ

## ಸೂಕ್ತಿಪ್ರಭಾ

### ತ್ಯಾಗ

**ನ**ಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಎರಡು ಆಲೋಚನಾ ತರಂಗಗಳು ಪ್ರವಹಿಸುತ್ತಿರುತ್ತವೆ. ಒಂದು ನಮ್ಮನ್ನು ಭಗವಂತನೆಡೆಗೆ ಕರೆದೊಯ್ಯುವುದು. ಇನ್ನೊಂದು ನಮ್ಮನ್ನು ಪ್ರಾಪಂಚಿಕತೆಯೆಡೆಗೆ ಒಯ್ಯುವುದು. ಮೊದಲನೆಯ ಚಿಂತನಾಲಹರಿಯು ನಮ್ಮನ್ನು ತ್ಯಾಗಮಾರ್ಗದಲ್ಲಿ ಕೊಂಡೊಯ್ದು, ಭಗವಂತನನ್ನು ಸೇರಿಸುವುದು. ಇನ್ನೊಂದು ಮಾರ್ಗವು ನಮ್ಮನ್ನು ಜಗತ್ತಿನ ಭೋಗಗಳತ್ತ ಎಳೆದೊಯ್ಯುವುದು. ನಾವು ಇವುಗಳ ಮಧ್ಯೆ ಒಂದನ್ನು ಆಯ್ಕೆಮಾಡಿಕೊಳ್ಳಬೇಕು. ಇದರ ಫಲವಾಗಿ ನಾವು ದೈವತ್ವವನ್ನು ಹೊಂದುವೆವು, ಇಲ್ಲವೇ ಪಶುವಿನಂತಾಗುವೆವು.

–ಸ್ವಾಮಿ ಬ್ರಹ್ಮಾನಂದ

**ನಾ**ನು ಆಧ್ಯಾತ್ಮಿಕ ಜೀವನದ ಸಾರಸರ್ವಸ್ವವನ್ನು ಹೇಳುವೆನು. ನನ್ನ ಹೃದಯಾಂತರಾಳದಲ್ಲಿ ನಾನು ಭಾವಿಸುವುದನ್ನು ವ್ಯಕ್ತಪಡಿಸುವೆನು. ತ್ಯಾಗದಿಂದ ಮಾತ್ರವೇ ಅಮೃತತ್ವವನ್ನು ಪಡೆಯಬಹುದು. ಯೋಗ ಮತ್ತು ಭೋಗ–ಭಗವಂತನೊಡನೆ ಸಮಾಗಮ ಮತ್ತು ಇಂದ್ರಿಯ ಭೋಗ–ಇವೆರಡೂ ಜೊತೆ ಜೊತೆಯಾಗಿ ಇರಲಾರವು. ಈ ಪ್ರಪಂಚದ ಸುಖವನ್ನು ತ್ಯಜಿಸದಿದ್ದರೆ, ಬ್ರಹ್ಮಾನಂದದ ರುಚಿಯನ್ನು ಸವಿಯಲಾಗದು.

– ಸ್ವಾಮಿ ಶಿವಾನಂದ

**ಎ**ಲ್ಲವನ್ನೂ ತ್ಯಜಿಸಿದ ತ್ಯಾಗಿಗಳು ಏನನ್ನೂ ಕಳೆದುಕೊಳ್ಳಲಾರರು. ನಾವು (ತ್ಯಾಗಿಗಳು) ಉದಾರಹೃದಯದವರಾಗಿರಬೇಕು. ನಮ್ಮ ಹೃದಯ ಮತ್ತು ಮನಸ್ಸು, ಉನ್ನತಸ್ತರದಲ್ಲಿರುವ ಸ್ವರ್ಗದಲ್ಲಿರುವವರನ್ನಾಗಲಿ ಅಥವಾ ನರಕಕೂಪದಲ್ಲಿರುವವರನ್ನಾಗಲಿ, ಎಲ್ಲ ಜೀವಿಗಳನ್ನೂ ಪ್ರೇಮದಿಂದ ಆಲಿಂಗಿಸಬೇಕು, ಹೆಸರು ಕೀರ್ತಿಗಳನ್ನು ಧಿಕ್ಕರಿಸಬೇಕು.

– ಸ್ವಾಮಿ ಪ್ರೇಮಾನಂದ

**ನ**ಮ್ಮ ಬಯಕೆಗಳನ್ನು ಮೀರಿದ ನೆಲೆಯಲ್ಲಿ ಮನಸ್ಸನ್ನು ನಿಲ್ಲಿಸುವುದೇ ತ್ಯಾಗದ ಗುರಿ. ಅದೊಂದು ಶೀಲಗುಣವೇನಲ್ಲ. ಆದರೆ ಒಳ್ಳೆಯ ಗುಣವೊಂದರ ಆಧಾರವೇ ಅದು.

– ಜಾನ್‌ಸನ್

**ಕೇ**ವಲ ಪ್ರಾಣತ್ಯಾಗದಿಂದ ಮನುಷ್ಯನು ಹುತಾತ್ಮನಾಗುವುದಿಲ್ಲ. ಆದರೆ ಆ ತ್ಯಾಗದ ಹಿಂದಿರುವ ಧ್ಯೇಯದಿಂದ ಹುತಾತ್ಮನಾಗುತ್ತಾನೆ.

– ನೆಪೋಲಿಯನ್

**ಇ**ತರರಿಂದ ಅಧಿಕಾರ ಪಡೆಯಲು ಹಾತೊರೆಯುವಂತೆ, ಮತ್ತೊಬ್ಬರಿಗೆ ಆ ಅಧಿಕಾರವನ್ನು ಬಿಟ್ಟುಕೊಡಲೂ ನಾವು ಸಿದ್ಧರಿರಬೇಕು.

– ಟ್ರೂಮನ್